# ವಿದಾಯ ಹೇಳಿದ ತ್ರಿವಿಕ್ರಮ

■ ಪ್ರವೀಣ ಕುಲಕರ್ಣಿ




ತ್ರಿವಿಕ್ರಮ ಮಹಾದೇವ... ವರ್ತಮಾನದಲ್ಲಿ ಬದುಕಿದ್ದ ಪುರಾಣ ಪುರುಷ ಅವರಾಗಿದ್ದರು. ಆದ್ದರಿಂದಲೇ ಅವರ ಹೆಸರಿನ ಹಿಂದೆ ಪುರಾಣ ಪುರುಷ ತ್ರಿವಿಕ್ರಮ ಎಂಬ ಹೆಸರು ಬೇರೆ ಅಂಟಿಕೊಂಡಿತ್ತು. ಬೆಂಗಳೂರಿನ ಒಂದಿಲ್ಲೊಂದು ಠಾಣೆಯ ಪೊಲೀಸರು ಇಲ್ಲವೆ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಗೆ ಅವರ ಹೆಸರು ನೆನಪಾಗದೆ ದಿನವೇ ಮುಗಿಯುತ್ತಿರಲಿಲ್ಲ. ಹೌದು, ರಾಜಧಾನಿಯ ಎಲ್ಲ ಅನಾಥ ಶವಗಳಿಗೆ ಅವರೇ ದಿಕ್ಕಾಗಿದ್ದರು. ಲಕ್ಷಾಂತರ ಮೃತದೇಹಗಳ ಅಂತ್ಯಕ್ರಿಯೆ ನಡೆಸಿದ ಮಹಾದೇವ ಕಳೆದ ವಾರ ಅಸುನೀಗಿದಾಗ ಸ್ಮಶಾನಗಳು ಕೂಡ ಮೌನ ಮುರಿದು ರೋದಿಸಿದವೇನೋ ಎಂಬ ಭಾವ ಕಾಡುತ್ತಿತ್ತು.

ಸತ್ತವರು ಯಾವ ಕಾಯಿಲೆಯಿಂದ ಬಳಲುತ್ತಿದ್ದರು, ಶವ ಯಾವ ಸ್ಥಿತಿಯಲ್ಲಿ ಸಿಕ್ಕಿತು (ವಿಶೇಷವಾಗಿ ಅಪಘಾತದಲ್ಲಿ ಸತ್ತವರದು) ಇದ್ಯಾವುದರ ಬಗೆಗೂ ತಲೆ ಕೆಡಿಸಿಕೊಳ್ಳದೆ, ಸಾವಿಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು ನಿತ್ಯ ಬೆಳಗಾದರೆ ಅಂತ್ಯ ಸಂಸ್ಕಾರಕ್ಕೆ ಹೊರಟು ನಿಲ್ಲುತ್ತಿದ್ದರು ಈ ಮಹಾದೇವ. ಸತ್ತವರಿಗೊಂದು ಗೌರವದ ವಿದಾಯ ಹೇಳುವ ಕಾಯಕವನ್ನು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದವರು ಅವರು. ನಂಜನಗೂಡು ತಾಲ್ಲೂಕಿನ ಪುಟ್ಟ ಹಳ್ಳಿಯಿಂದ ಬೆಂಗಳೂರಿಗೆ ಬಂದಿದ್ದ ಮಹಾದೇವ, ಅಮ್ಮನ ಅಗಲಿಕೆಯಿಂದ ಆಘಾತಕ್ಕೆ ಒಳಗಾದರೂ ಮುಂದಿನ ಐದೂವರೆ ದಶಕಗಳವರೆಗೆ ನಡೆಸಿದ ಸಮಾಜ ಸೇವೆ ಪ್ರಪಂಚದ ಗಮನವನ್ನೇ ಸೆಳೆದಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ಮಹಾದೇವ ಅವರ ಅಮ್ಮ, ಚಿನ್ನಾಭರಣ ಮಾರಿ, ದೂರದ ಹಳ್ಳಿಯಿಂದ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಿಸದೆ ಅವರು ಅಸುನೀಗಿದಾಗ ಶವ ಪಡೆಯಲು ಯಾರೂ ಮುಂದೆ ಬಾರದಿದ್ದರಿಂದ ಆಸ್ಪತ್ರೆಯ ಸಿಬ್ಬಂದಿಯೇ ಅವರ ಮೃತದೇಹದ ಅಂತ್ಯಕ್ರಿಯೆಯನ್ನು ನಡೆಸಿದ್ದರು. ಆಗಿನ್ನೂ ಏಳು ವರ್ಷದ ಬಾಲಕನಾಗಿದ್ದ ಮಹಾದೇವ ಅವರನ್ನು ಊರಿಗೆ ಮರಳಿ ಕಳುಹಿಸಿಕೊಡಲು 12 ರೂಪಾಯಿ ನಿಧಿ ಸಂಗ್ರಹಿಸಿದ ಸಿಬ್ಬಂದಿ, ಬಸ್ ಏರಿಸಲು ಹೊರಟಾಗ, ಮಹಾದೇವ ಊರಿಗೆ ಮರಳಲು ನಿರಾಕರಿಸಿದ್ದರು. ಅನಾಥ ಶವಗಳನ್ನು ಸಾಗಿಸುತ್ತಿದ್ದ ಹಿರಿಯ ಜೀವದ ಜತೆ ಬದುಕು ಸಾಗಿಸಲು ನಿರ್ಧರಿಸಿದ್ದರು.

ಆ ದಿನಗಳಿಂದಲೂ ಅನಾಥ ಶವಗಳನ್ನು ಕುದುರೆ ಗಾಡಿಯಲ್ಲಿ ಸ್ಮಶಾನಕ್ಕೆ ಸಾಗಿಸಿ, ಅಂತ್ಯಕ್ರಿಯೆ ನಡೆಸುವ ಕಾಯಕವನ್ನೇ ತಮ್ಮ ಬದುಕಿನ ಧ್ಯೇಯವನ್ನಾಗಿ ಮಾಡಿಕೊಂಡರು. ಪ್ರತಿಯೊಂದು ಶವ ಸಂಸ್ಕಾರಕ್ಕೆ ಪೊಲೀಸ್ ಇಲಾಖೆಯಿಂದ ಒಂದಿಷ್ಟು ಹಣವನ್ನೇನೋ ಪಾವತಿ ಮಾಡಲಾಗುತ್ತಿತ್ತು. ಆದರೆ, ಅಂತ್ಯಕ್ರಿಯೆಗೆ ತಗಲುವ ವೆಚ್ಚ ಕಳೆದ ಮೇಲೆ ಅವರಿಗೆ ಉಳಿಯುತ್ತಿದ್ದ ದುಡ್ಡು ಅತ್ಯಲ್ಪ.

ಮಹಾದೇವ ಅವರ ನಿಸ್ವಾರ್ಥ ಸೇವೆಯ ಕುರಿತು ಮೊತ್ತಮೊದಲು ನಾಡಿನ ಗಮನಸೆಳೆದದ್ದು 'ಸುಧಾ' ಪತ್ರಿಕೆ. ಅದಾದ ಬಳಿಕ ಅವರ ಕುರಿತು ಸಾಕ್ಷ್ಯಚಿತ್ರ, ಸಿನಿಮಾ ಎಲ್ಲವೂ ನಿರ್ಮಾಣವಾದವು. ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. 'ಕಲಿಯುಗದ ತ್ರಿವಿಕ್ರಮ' ಎಂಬ ಬಿರುದನ್ನೂ ಅವರಿಗೆ ನೀಡಲಾಯಿತು.

ನಿರ್ಮಾಣ ಹಂತದಲ್ಲಿದ್ದ ಗಂಗಾರಾಮ್ ಕಟ್ಟಡ 1982ರಲ್ಲಿ ಕುಸಿದಾಗ, ಮೃತದೇಹಗಳನ್ನು ಹೊತ್ತು ತರಲು ಮಹಾದೇವ ಕೂಡ ಹೋಗಿದ್ದರು. ಕೆಲವು ಶವಗಳು ಮಹಾದೇವ ಅವರ ಮೇಲೇ ಬಿದ್ದಾಗ, ಅವರ ಉಸಿರೇ ನಿಂತುಹೋಗುವ ಸನ್ನಿವೇಶ ಸೃಷ್ಟಿಯಾಗಿತ್ತು. ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದ ಜನ, ಶವಗಳ ಅಡಿಯಿಂದ ಇವರನ್ನು ಹಿಡಿದೆಳೆದು ಜೀವ ಉಳಿಸಿದ್ದರು. ದೇಶದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರ ಹತ್ಯೆಯಲ್ಲಿ ಭಾಗಿಯಾದ ಮುಖ್ಯ ಆರೋಪಿಗಳಲ್ಲಿ ಒಬ್ಬನಾಗಿದ್ದ ಶಿವರಾಸನ್ ಕೋಣನಕುಂಟೆಯಲ್ಲಿ ಪೊಲೀಸರ ಗುಂಡಿಗೆ ಬಲಿಯಾದ ಸಂದರ್ಭವದು. ಶಿವರಾಸನ್‌ನ ಮೃತದೇಹದ ಅಂತ್ಯಕ್ರಿಯೆಯನ್ನು ಪೊಲೀಸರು ಗೌಪ್ಯವಾಗಿ ಮಾಡಲು ಉದ್ದೇಶಿಸಿದ್ದರು. ಈ ಕಾರ್ಯಕ್ಕೆ ನಿಯೋಜನೆಗೊಂಡಿದ್ದು ಮಹಾದೇವ ಅವರೇ. ಶಿವರಾಸನ್‌ನ ಮೃತದೇಹ ಸಾಗಿಸುವಾಗ ಮಹಾದೇವರ ಕುದುರೆ ಗಾಡಿಗೆ ಎರಡು ಪೊಲೀಸ್ ಜೀಪುಗಳು ರಕ್ಷಣೆ ಒದಗಿಸಿದ್ದವು.

ಕುದುರೆ ಗಾಡಿ ಬದಲು ವಾಹನದ ವ್ಯವಸ್ಥೆ ಮಾಡಿಕೊಳ್ಳಲು ಬಿಬಿಎಂಪಿ ಅವರಿಗೆ ಆರ್ಥಿಕ ನೆರವು ನೀಡಿತ್ತು. ರೈಲ್ವೆ ಇಲಾಖೆಯಿಂದ ಅವರಿಗೊಂದು ಮೊಬೈಲ್ ಕೊಡಿಸಲಾಗಿತ್ತು. ಕೆಲವು ಹಿತೈಷಿಗಳು ಅವರ ವಾಹನಕ್ಕೆ ಆಗಾಗ ಉಚಿತವಾಗಿ ಡಿಸೇಲ್ ಹಾಕಿಸುತ್ತಿದ್ದರು. ಆದರೆ, ಬದುಕಿನ ಕೊನೆಯ ದಿನಗಳಲ್ಲಿ ಆರ್ಥಿಕ ಸಂಕಷ್ಟ ಎದುರಿಸಿದ ಮಹಾದೇವ ಅವರು, ತಮಗೆ ಸಿಕ್ಕಿದ್ದ ಮುಖ್ಯಮಂತ್ರಿಗಳ ಪದಕವನ್ನೇ ಮಾರಿ ಸಾಲದ ಕಂತು ತೀರಿಸಿದ್ದರು. ಶ್ವಾಸಕೋಶದ ಕ್ಯಾನ್ಸರ್‌ನಿಂದ ಅವರು ಬಳಲುತ್ತಿದ್ದರು. ತಮ್ಮ ಮಕ್ಕಳಿಗೂ ಅಂತ್ಯಕ್ರಿಯೆ ನಡೆಸುವ ದೀಕ್ಷೆ ಕೊಟ್ಟಿದ್ದರು. ಲಕ್ಷಾಂತರ ಅನಾಥ ಶವಗಳ ಅಂತ್ಯಸಂಸ್ಕಾರ ನಡೆಸಿದ್ದ ಇಂತಹ ನಿಸ್ವಾರ್ಥ ಜೀವವೊಂದು ಸದ್ದಿಲ್ಲದೆ ಸರಿದುಹೋಯಿತು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65